ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ರಾಜ್ಯದಲ್ಲಿ ಸಾವಿರಾರು ಜನ ಮಾತ್ರವಲ್ಲ, ಲಕ್ಷಾಂತರ ಜನ ತೆಂಗಿನ ಬೆಳೆಯನ್ನು ಅವಲಂಬಿಸಿದ್ದಾರೆ. ತೆಂಗಿನ ಬೋರ್ಡಿನಿಂದ ನಾನಾ ರೂಪದಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಿದೆ. ಆದ್ದರಿಂದ ಇಂಥ ಒಂದು ಬೋರ್ಡು ಅವಶ್ಯಕ, ಇದನ್ನು ಆದಷ್ಟು ಬೇಗ ಪರಿಶೀಲನೆ ಮಾಡಿ ರಚನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಇದನ್ನು ಪರಿಶೀಲಿಸೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸ್ವಾಮಿ, ಕೋಕೊನೆಟ್ ಬೋರ್ಡು ಬಗ್ಗೆ ಹತ್ತಾರು ವರ್ಷಗಳಿಂದ ತೆಂಗಿನ ಬೆಳೆಗಾರರು ಸರ್ಕಾರದಲ್ಲಿ ಒಂದಲ್ಲ ಒಂದು ವಿಧದಲ್ಲಿ, ಮೇಲಿಂದ ಮೇಲೆ ನಿವೇದನೆ ಮಾಡುತ್ತಾ ಬಂದಿದ್ದಾರೆ. ತೆಂಗಿನ ಬೆಳೆಯ ಅಭಿವೃದ್ಧಿಗೆ ಅಗ್ರಿಕಲ್ಚರ್ ರಿಫೈನಾನ್ಸ್ ಕಾರ್ಪೋರೇಷನ್ ನವರು ಹಣ ಕೊಡುತ್ತಾರೆ. ತೆಂಗಿನ ಬೆಳೆ ಸಾಫಲ್ಯವಾಗಬೇಕಾದರೆ ಇಂಥ ಒಂದು ಬೋರ್ಡು ಅವಶ್ಯಕ. ತೆಂಗಿನ ಬೆಳೆಗಾರರ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಬೋರ್ಡನ್ನು ರಚನೆ ಮಾಡುವುದಕ್ಕೋಸ್ಕರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಮೊದಲೇ ಹೇಳಿದ ಉತ್ತರವನ್ನು ಮಾನ್ಯ ಸದಸ್ಯರಿಗೂ ಹೇಳಬಯಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ತೆಂಗಿನ ಬೆಳೆಗೆ ಸಾಲವನ್ನು ಕೋ ಆಪರೇಟೀವ್ ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕಿನವರು ಕೊಡುತ್ತಾರೆ. ಅದನ್ನು ಕೊಡಬೇಕಾದರೆ ಇಷ್ಟು ಭೂಮಿ ಆಧಾರ ಇರಬೇಕು ಎಂದು ಅದರಲ್ಲಿ ನಿಗಧಿ ಮಾಡಿದ್ದಾರೆ. ಆ ನಿಗಧಿ ಇರುವುದರಿಂದ ಒಂದು ಎಕರೆ, ಅಥವಾ ಎರಡು ಎಕರೆ ಇರುವ ತೆಂಗಿನ ಬೆಳೆಗಾರರಿಗೆ ಸಾಲದ ಸೌಲಭ್ಯ ದೊರೆಯುತ್ತಾ ಇಲ್ಲ. ಆದ್ದರಿಂದ ಎರಡು ಎಕರೆ ತೆಂಗಿನ ತೋಟ ಇರುವವರಿಗೂ ಸಾಲ ಕೊಡುವ ರೀತಿಯಲ್ಲಿ ವ್ಯವಸ್ಥೆಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈ ಪ್ರಶ್ನೆ ಉದ್ಭವಿಸುವುದಿಲ್ಲ, ಮಾನ್ಯ ಸದಸ್ಯರು ಹೇಳಿದ ಒಂದು ವಿಷಯವನ್ನು ಗಮನದಲ್ಲಿಟ್ಟುಕೊಂಡು ಆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ

1-30 P.M.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ಈ ದೇಶದಲ್ಲಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಎಕರೆ ತೆಂಗು ಬೆಳೆಯುತ್ತಿದ್ದಾರೆ ಮತ್ತೆ ತೆಂಗಿನ ಬೆಳೆಯ ವ್ಯವಸಾಯಗಾರರು ಎಷ್ಟು ಎಕರೆಯಲ್ಲಿ ಬೆಳೆಯುವುದಕ್ಕೆ ಸಿದ್ಧರಾಗಿದ್ದಾರೆ ಎನ್ನುವ ಅಂಕಿಅಂಶಗಳನ್ನು ಆದಷ್ಟು ಬೇಗ ತಯಾರುಮಾಡುವುದಕ್ಕೆ ಸೂಕ್ತ ನಿರ್ದೇಶನವನ್ನು ನೀಡಿ ತನ್ಮೂಲಕ ಬೋರ್ಡ್ ರಚನೆ ಆಗುವುದಕ್ಕೆ ಅವಕಾಶ ಮಾಡಿಕೊಡುತ್ತೀರಾ ?

ಶ್ರೀ ಕೆ. ಎಚ್. ಪಾಟೀರ್.—ಈಗಾಗಲೇ ಅಗ್ರಿಕರ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಅಂಕಿಸಂಖ್ಯೆಗಳು ಇವೆ, ಮಾನ್ಯ ಸದಸ್ಯರು ಕೇಳಿದ್ದರೆ ಒದಗಿಸಬಹುದಿತ್ತು. ಆದರೂ ಸಹ ಬೋರ್ಡ್ ರಚನೆ ಮಾಡಬೇಕು ಎಂದು ಸಭೆಯಲ್ಲಿ ಅಭಿಪ್ರಾಯ ಇದೆ ಅದನ್ನು ಗಮನಕ್ಕೆ ತೆಗೆದುಕೊಂಡು ಬೋರ್ಡ್ ರಚನೆ ಮಾಡುವುದಕ್ಕೆ ತೀವ್ರ ಕ್ರಮ ಕೈಗೊಳ್ಳುತ್ತೇವೆ.

Leasing of Land for Removal of Sand

707. Sri B. BYRAPPAJI (Turuvekere).—

Will the Minister for Industries be pleased to state :—

(*a*) whether it is a fact that the Mines and Geology Department has granted on long term lease the gomal lands of Hapala village in Turuvekere Taluk for removing the sand ;

(SRI B. BYRAPPAJI)

(*b*) if so, the date of lease ;

(*c*) whether they have obtained the permission of the Revenue Department as the said land belongs to Revenue Department ;

(*d*) whether it has come to the notice of the Government that due to removal of sand from this land damage has been caused to the garden and other lands worth lakhs of rupees belonging to ryots ; and thereby loss is boing caused ;

(*e*) if so, the steps taken to prevent the loss caused to ryots ?

SRI S. M. KRISHNA (Minister for Industries).—

(*a*) No lease has been granted to remove the sand in Hapala village of Turuvekere Taluk.

(*b*) to (*e*) Do not arise.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ ತುರುವೇಕೆರೆ ತಾಲ್ಲೂಕಿನಲ್ಲಿ ತಾವು ಕೊಟ್ಟಿರುವುದು ಹೆಸರು ಹಾವಾಡ ಎಂದು ಅದು ಹಾವಾಳ ಎಂದು ಇರಬೇಕಿತ್ತು. ಆ ರೀತಿ ಇದ್ದರೆ ಸರಿಯಾಗುತ್ತದೆ. ಅಲ್ಲಿಂದ ಸಾವಿರಾರು ಲಾರಿ ಮರಳು ತೆಗೆದುಕೊಂಡು ಹೋಗುತ್ತಿದ್ದಾರೆ ಅವರೆ ಉತ್ತರದಲ್ಲಿ ಪರವಾನಗೆ ಕೊಟ್ಟಿಲ್ಲ ಎಂದು ಹೇಳಿದ್ದೀರಿ ನನಗೆ ಸಮಂಜಸವಾದ ಉತ್ತರಬೇಕು.

† ಶ್ರೀ ಎಸ್. ಎಂ. ಕೃಷ್ಣ.—ಬಹುಶಃ ಅವರು ಹೇಳುತ್ತಾ ಇರುವ ಜಪಾನು ಹಾವಾಳ ಅಥವಾ ಹಾಪಾಳ ಗ್ರಾಮದ ಬೌಂಡರಿಯಲ್ಲಿ ಬರುವುದಿಲ್ಲವೋ ಏನೋ ?

ಶ್ರೀ ಬಿ. ಬೈರಪ್ಪಾಜಿ.—ತುರುವೇಕೆರೆ ಮತ್ತು ಹಾವಾಳ ಎರಡರ ಮಧ್ಯೆ ಒಂದು ಪರ್ಲಾಂಗ್ ನಲ್ಲಿ ಜಪಾನು ಇದೆ. ಸ್ವಲ್ಪ ವ್ಯತ್ಯಾಸ ಆಗಿರಬಹುದು, ಅಲ್ಲಿ ಏನು ಆಗುತ್ತ ಇದೆ ಎಂದರೆ ವರ್ಷದಲ್ಲಿ ಲಕ್ಷಾಂತರ ಲಾರಿ ಮರಳು ಹೇರಿಕೊಂಡು ಹೋಗಿ ತೆಂಗು ತೋಟ ಕೊರೆದು ಹೋಗುತ್ತದೆ. ತೋಟಗಳು ಕೊರೆಯುತ್ತಾ ಇರುವುದನ್ನು ತಪ್ಪಿಸಲು ಈ ರೀತಿ ಮರಳು ತೆಗೆದುಕೊಂಡು ಹೋಗದಂತೆ ಸೂಕ್ತವಾದ ನಿರ್ದೇಶನ ನೀಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಸದಸ್ಯರು ಲಕ್ಷಾಂತರ ಲಾರಿಗಳು ಮರಳು ತೆಗೆಯುತ್ತಿದ್ದಾರೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಇದನ್ನು ಪರಿಶೀಲನೆ ಮಾಡುತ್ತೇನೆ. ಆದರೆ ಮಳೆಗಾಲದಲ್ಲಿ ಬರತಕ್ಕ ಮರಳನ್ನು ತೆಗೆಯುವುದರಿಂದ ಜಪಾನಿಗೆ ತೊಂದರೆಯಾಗುವುದಿಲ್ಲ ಎನ್ನುವುದು ಸರ್ಕಾರದ ಅಭಿಪ್ರಾಯ. ಮಾನ್ಯ ಸದಸ್ಯರು ಕಾರಣಾಂತರಕ್ಕಾಗಿ ಹೇಳಿ ಆ ರೀತಿ ಪರವಾನಗಿ ಇಲ್ಲದೆ ಮರಳನ್ನು ತೆಗೆಯುತ್ತಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಸಿರುವುದರಿಂದ ಮರಳು ತೆಗೆಯದೆ ಇರುವುದಕ್ಕೆ ನಾನು ಏನು ಬೇಕು ಅದನ್ನು ಮಾಡುತ್ತೇನೆ.

ಶ್ರೀ ಬಿ. ಬೈರಪ್ಪಾಜಿ.—ರೆವಿನ್ಯೂ ಮಂತ್ರಿಗಳನ್ನು ಕರೆದುಕೊಂಡು ಹೋಗಿ ಸ್ಥಳವನ್ನು ತೋರಿಸಿದೆ. ಅವರು ಕೂಡ ನೋಡಿಕೊಂಡು ಬಂದಿದ್ದಾರೆ, ತಮಗೂ ಕೂಡ ತಿಳಿಸುತ್ತೇನೆ. ಅಲ್ಲಿ ವರ್ಷಕ್ಕೆ ನೂರಾರು ಲಾರಿ ಮರಗಳು ಬಿದ್ದು ಹೋಗುತ್ತಿವೆ. ಮರಳನ್ನು ತೆಗೆಯುವುದರಿಂದ ಭೂಮಿ ಕೊರೆದು ಹೋಗುತ್ತಿದೆ. ರೆವಿನ್ಯೂ ಮಂತ್ರಿಗಳು ನೋಡಿಕೊಂಡು ಬಂದಿದ್ದಾರೆ. ಲಕ್ಷಾಂತರ ರೂಪಾಯಿ ವರ್ಷಕ್ಕೆ ರೈತರಿಗೆ ನಷ್ಟವಾಗುತ್ತಿದೆ. ಆದುದರಿಂದ ದಯಮಾಡಿ ಮಂತ್ರಿಗಳು ಈ ಬಗ್ಗೆ ಸೂಕ್ತ ನಿರ್ದೇಶನ ಕೊಟ್ಟು ಮರಳು ತೆಗೆಯುವುದು ಸರಿಯಲ್ಲ ಎಂದು ಕಂಡುಬಂದರೆ ಅದನ್ನು ನಿಲ್ಲಿಸತಕ್ಕ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ಯಾವ ಸ್ಥಳದಲ್ಲಿ ಕೊರೆದು ಹೋಗಿದೆ ಎಂದು ಸರಿಯಾಗಿ ಎವರ ಕೊಟ್ಟರೆ 24 ಗಂಟೆಯೊಳಗೆ ಮರಳು ತೆಗೆದುಕೊಂಡು ಹೋಗುವುದನ್ನು ನಿಲ್ಲಿಸುತ್ತೇನೆ.